# <u>ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮಂಡ್ಯ</u>

ಸಂಖ್ಯೆ:ಜಿಪಂಮ:ಉಕಾ2:ಡಿ6:ಸಿಆರ್-104:2011-12 ದಿನಾಂಕ:18-11-2011

## <u>ಸುತ್ತೋಲೆ</u>

ವಿಷಯ:- ಮಂಡ್ಯ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ **<u>ನಾಗರೀಕ ಸನ್ನದು</u>** ರಚಿಸುವ ಬಗ್ಗೆ

ಉಲ್ಲೇಖ:- ರಾಜ್ಯ ಮಟ್ಟದ ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮ್ಮೇಳನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನೀಡಿದ ನಿರ್ದೇಶನದಂತೆ.

****

ರಾಜ್ಯ ಮಟ್ಟದ ಎಲ್ಲಾ ಜಿಲ್ಲಾಧಿಕಾರಿಗಳ ಹಾಗೂ ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮ್ಮೇಳನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಇಲಾಖೆಗಳಲ್ಲಿ ಸಾರ್ವಜನಿಕರಿಗೆ ನೀಡುವ ಸೇವೆ ಮತ್ತು ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸುವ ಸಂಬಂಧ ಜನಸ್ನೇಹಿ ಆಡಳಿತವನ್ನು ನೀಡುವ ಸಲುವಾಗಿ ಎಲ್ಲಾ ಇಲಾಖೆಗಳು **<u>ನಾಗರೀಕ ಸನ್ನದು</u>** ಗಳನ್ನು ರಚಿಸಿ, ಅವುಗಳನ್ವಯ ಸಾರ್ವಜನಿಕರಿಗೆ ಸಕಾಲದಲ್ಲಿ ಉತ್ತಮ ಸೇವೆ ಒದಗಿಸುವಂತೆ ಕ್ರಮ ಕೈಗೊಳ್ಳಲು ಸೂಚನೆ ನೀಡಿರುತ್ತಾರೆ.

ಅದರಂತೆ, ಮಂಡ್ಯ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಒದಗಿಸಬಹುದಾದ ಸೇವೆ ಹಾಗೂ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಗಳ **<u>ನಾಗರೀಕ ಸನ್ನದು</u>** ರಚಿಸಿ, ಇದರೊಂದಿಗೆ ಲಗತ್ತಿಸಿದೆ. ಸದರಿ ನಾಗರೀಕ ಸನ್ನದ್ದಿನ ವಿವರಗಳನ್ನು ಎಲ್ಲಾ ಗ್ರಾಮ ಪಂಚಾಯಿತಿಗಳು ಸಾರ್ವಜನಿಕರಿಗೆ ಕಾಣುವ ರೀತಿಯಲ್ಲಿ ಪ್ರಚುರ ಪಡಿಸಿ ನಿಗದಿ ಪಡಿಸಿರುವ ಕಾಲಮಿತಿಗಳಲ್ಲಿ ಉತ್ತಮ ಸೇವೆ ಮತ್ತು ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಜಿಲ್ಲೆಯ ಎಲ್ಲಾ ಗ್ರಾ.ಪಂ.ನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದೆ.

(ಜಿ. ಜಯರಾಂ)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಮಂಡ್ಯ

<u>ಪ್ರತಿಯನ್ನು:</u>

1) ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1
2) ಜಿಲ್ಲಾ ಪಂಚಾಯತ್‌ನ ಎಲ್ಲಾ ಶಾಖಾ ಮುಖ್ಯಸ್ಥರುಗಳಿಗೆ.
3) ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
4) ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ.
5) ಕಛೇರಿ ಪ್ರತಿ.

| ಜಿಲ್ಲಾ ಪಂಚಾಯತ್ ಮಂಡ್ಯ, ಮಂಡ್ಯ ಜಿಲ್ಲೆ.<br>ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದ ನಾಗರೀಕ ಸನ್ನದು | | | | |
|---|---|---|---|---|
| ಕ್ರ.ಸಂ. | ದೊರೆಯುವ ಸೌಲಭ್ಯ ಮತ್ತು ಸವಲತ್ತುಗಳು | ಅರ್ಜಿ ಸಲ್ಲಿಸಬೇಕಾದ ವಿಧಾನ ಮತ್ತು ಲಗತ್ತಿಸಬೇಕಾದ ದಾಖಲಾತಿಗಳು | ಯಾರಿಗೆ ಅರ್ಜಿ ಯನ್ನು ಸಲ್ಲಿಸಬೇಕು | ಕಾಲಮಿತಿ |
| 1 | ವಿದ್ಯುತ್ ಸಂಪರ್ಕ ಪಡೆಯಲು ನಿರಾಕ್ಷೇಪಣ ಪತ್ರ | 1.ಅರ್ಜಿ<br>2.ಸ್ವತ್ತಿಗೆ ಸಂಬಂಧಿಸಿದ ಡಿಮ್ಯಾಂಡ್ /ಅಸೆಸ್ಸ್ ಮೆಂಟ್ ನಕಲು<br>3.ತಹಲ್ ವರೆಗೆ ತೆರಿಗೆ ಪಾವತಿಸಿರುವ ರಶೀದಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | 30 ದಿನಗಳು |
| 2 | ಕಟ್ಟಡ ಲೈಸೆನ್ಸ್ | 1.ಅರ್ಜಿ<br>2.ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಿರುವ ಭೂಮಿಗೆ ಸಂಬಂಧಿಸಿದಂತೆ ನಿವೇಶನ ನಕ್ಷೆ (ಕಟ್ಟಡದ ಸ್ಥಾನವನ್ನು ತೋರಿಸುವ )<br>3. ಸ್ವತ್ತಿಗೆ ಸಂಬಂಧಿಸಿದ ಡಿಮ್ಯಾಂಡ್ /ಅಸೆಸ್ಸ್ ಮೆಂಟ್ ನಕಲು<br>4.ತಹಲ್ ವರೆಗೆ ತೆರಿಗೆ ಪಾವತಿಸಿರುವ ರಶೀದಿ<br>5.ಕಟ್ಟಲಿರುವ ಕಟ್ಟಡದ ನಕಾಶೆಯ 4 ಪ್ರತಿಗಳು<br>6.ಕ್ರಯ ಪತ್ರ/ವಿಭಾಗ ಪತ್ರ/ವ್ಯವಸ್ಥಾ ಪತ್ರದ ನಕಲು<br>7.ನಿಗದಿ ಪಡಿಸಿರುವ ಶುಲ್ಕ ಪಾವತಿ ರಶೀದಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | 60 ದಿನಗಳು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುವುದು |
| 3 | ಕಾರ್ಖಾನೆ,ವ್ಯಾಪಾರ,ಉದ್ದಿಮೆ | 1.ಅರ್ಜಿ | ಪಂಚಾಯತ್ ಅಭಿವೃದ್ಧಿ | 60 ದಿನಗಳು ಗ್ರಾಮ |

| | | | | |
|---|---|---|---|---|
| | ಸ್ಥಾಪನೆಗಾಗಿ ಸಾಮಾನ್ಯ ಲೈಸೆನ್ಸ್ | 2. ಸ್ವತ್ತಿಗೆ ಸಂಬಂಧಿಸಿದ ಡಿಮ್ಯಾಂಡ್ /ಅಸೆಸ್ಸ್ ಮೆಂಟ್ ನಕಲು<br>3.ತಹಲ್ ವರೆಗೆ ತೆರಿಗೆ ಪಾವತಿಸಿರುವ ರಶೀದಿ<br>4.ಕಟ್ಟಡ /ನಿವೇಶನ ಮಾಲಿಕರ ಜೊತೆ ಮಾಡಿಕೊಂಡ ಕರಾರು ಪತ್ರ<br>5.ನಿಗಧಿ ಪಡಿಸಿರುವ ಶುಲ್ಕ ಪಾವತಿ ರಶೀದಿ<br>6.ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪತ್ರ | ಅಧಿಕಾರಿ/ಕಾರ್ಯದರ್ಶಿ | ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುವುದು |
| 4 | ವಿವಿಧ ವಸತಿ ಯೋಜನೆಗಳ ಫಲಾನುಭವಿಗಳ ಆಯ್ಕೆಯ ಬಗ್ಗೆ | 1.ನಿಗಧಿತ ನಮೂನೆಯಲ್ಲಿ ಅರ್ಜಿ<br>2.ಗ್ರಾಮ ಸಭೆಯಲ್ಲಿ ಹಾಜರುದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವುದು<br>3.ವಸತಿರಹಿತರ ಪಟ್ಟಿಯಲ್ಲಿ ಹೆಸರು ಇರಬೇಕು.ಸರ್ವಕುಟುಂಬ ಸಮೀಕ್ಷೆಯಲ್ಲಿ 30 ಅಂಕಗಳೊಳಗೆ ಇರಬೇಕು.<br>4.ಸ್ವತ್ತಿಗೆ ಸಂಬಂಧಿಸಿದ ದಾಖಲಾತಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಚಾಲ್ತಿ ವರ್ಷಕ್ಕೆ ಮಂಜೂರಾದ ಗುರಿಯನ್ನು ಆಧಾರಿಸಿ ಕ್ರಮವಹಿಸಲಾ ಗುವುದು |
| 5 | ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ<br>1. ಉದ್ಯೋಗ ಚೀಟಿ | 1.ನಿಗಧಿತ ನಮೂನೆ 1ರಲ್ಲಿ ದ್ವಿಪ್ರತಿಯಲ್ಲಿ ಅರ್ಜಿ<br>2.3 ಭಾವಚಿತ್ರಗಳು<br>3.ಚುನಾವಣಾ ಗುರುತಿನ ಚೀಟಿ /ಪಡಿತರ ಚೀಟಿ ಪ್ರತಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | 15 ದಿನಗಳು |

| | | | | |
|---|---|---|---|---|
| | 2. ಉದ್ಯೋಗ | 1.ನಿಗಧಿತ ನಮೂನೆ 6 ರಲ್ಲಿ ದ್ವಿಪ್ರತಿಯಲ್ಲಿಅರ್ಜಿ<br>2.ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ತೆರೆದಿರುವ ಖಾತೆ ಸಂಖ್ಯೆ (ಕನಿಷ್ಠ 8 ಜನರ ತಂಡವಿರಬೇಕು | | |
| 6 | ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ | 1.ನಿಗಧಿತ ನಮೂನೆಯಲ್ಲಿ ಅರ್ಜಿ<br>2.ನಿಗಧಿತ ಶುಲ್ಕ ರೂ.10 ರ ಐ.ಪಿ.ಓ. ಅಥವಾ ಡಿಡಿ ಅಥವಾ ನಗದು ಪಾವತಿಸಿದ ರಶೀದಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | 30 ದಿನಗಳು<br>ಯಾವುದೇ ವ್ಯಕ್ತಿಯ ಜೀವ/ಸ್ವಾತಂತ್ರಕ್ಕೆ ಸಂಬಂಧಿಸಿದ ವಿಷಯವಾಗಿದ್ದಲ್ಲಿ 48 ಗಂಟೆ |
| 7 | ಅನ್ಯಾ ಕ್ರಾಂತಕ್ಕಾಗಿ ನಿರಾಕ್ಷೇಪಣಾ ಪತ್ರ | 1.ಅರ್ಜಿ<br>2.ಜಮೀನಿಗೆ ಸಂಬಂಧಸಿದ ಚಾಲ್ತಿ ವರ್ಷದ ಪಹಣಿ (ಆರ್.ಟಿ.ಸಿ.)<br>3.ಜಮೀನಿನ ನಕಾಶೆ (ರೆವಿನ್ಯೂ ನಕ್ಷೆ)<br>4.ನಿಗಧಿ ಪಡಿಸಿದ ಶುಲ್ಕ ಪಾವತಿಸಿದ ರಶೀದಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | 30 ದಿನಗಳು<br>ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುವುದು |
| 8 | ಸ್ವತ್ತಿನ ಹಕ್ಕು ಬದಲಾವಣೆ | 1.ಅರ್ಜಿ<br>2. ನೋಂದಾಯಿತ ಕ್ರಯ ಪತ್ರ/ವಿಭಾಗ ಪತ್ರ/ವ್ಯವಸ್ಥಾ ಪತ್ರ/ವಿಲ್ ಪತ್ರ/ಹಕ್ಕು ಪತ್ರ<br>3.ಪೌತಿ ಖಾತೆಯಾಗಿದ್ದಲ್ಲಿ ಮರಣ ದೃಢೀಕರಣ ಪತ್ರ<br>4.ವಂಶ ವೃಕ್ಷ<br>5.ನಿಗಧಿ ಪಡಿಸಿದ ಶುಲ್ಕ ಪಾವತಿಸಿದ ರಶೀದಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | 45 ದಿನಗಳು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯದಂತೆ ಕ್ರಮವಹಿಸಲಾ ಗುವುದು |

| | | | | |
|---|---|---|---|---|
| | | | | |
| 9 | ಡಿಮ್ಯಾಂಡ್ /ಅಸೆಸ್ ಮೆಂಟ್ ನಕಲು | 1.ಅರ್ಜಿ<br>2.ಸದರಿ ಸ್ವತ್ತಿಗೆ ಸಂಬಂಧಿಸಿದ ಹಿಂದಿನ ಡಿಮ್ಯಾಂಡ್ /ಅಸೆಸ್ ಮೆಂಟ್ ಪ್ರತಿ<br>3. ಚಾಲ್ತಿ ವರ್ಷದ ವರೆಗೆ ತೆರಿಗೆ ಪಾವತಿ ರಶೀದಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | 7 ದಿನಗಳು |
| 10 | ಸಂಪೂರ್ಣ ಸ್ವಚ್ಛತಾ ಅಂದೋಲನದಡಿಯಲ್ಲಿ ಪ್ರೋತ್ಸಾಹ ಧನ | 1.ನಿಗದಿತ ನಮೂನೆಯಲ್ಲಿ ಅರ್ಜಿ<br>2. ಸರ್ವಕುಟುಂಬ ಸಮೀಕ್ಷೆಯಲ್ಲಿ 20 ಅಂಕಗ ಳೊಳಗೆ ಇರಬೇಕು. | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | ಸರ್ಕಾರದಿಂದ ಅನುದಾನ ಬಿಡುಗಡೆಯಾದ 15 ದಿನ ಗಳು |
| 11 | ಶೇಕಡ 25ರ ಅನುದಾನದಲ್ಲಿ ವೈಯಕ್ತಿಕ ಫಲಾನುಭವಿ ಗಳಿಗೆ ಸೌಲಭ್ಯ(ಪ .ಜಾತಿ ಹಾಗೂ ಪ. ವರ್ಗದವರಿಗೆ | 1.ಅರ್ಜಿ<br>2.ಜಾತಿ/ಅದಾಯದ ಪ್ರಮಾಣ ಪತ್ರ<br>3.ಸದರಿ ವೃತ್ತಿಯ ಬಗ್ಗೆ ತರಭೇತಿ ಪ್ರಮಾಣ ಪತ್ರ<br>4.ಉನ್ನತ ವ್ಯಾಸಂಗ ಮಾಡುತ್ತಿರುವ ಬಗ್ಗೆ ರಶೀದಿ ಗಳು | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿ | ಆರ್ಥಿಕ ವರ್ಷದಲ್ಲಿ ಗ್ರಾಮ ಸಭೆಯಲ್ಲಿ ಅಂಗೀಕಾರ ಪಡೆದ ನಂತರ ಸಾಮಾಜಿಕ ನ್ಯಾಯ ಸಮಿತಿ ಹಾಗೂ ಸಾಮಾನ್ಯ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗುವುದು |